**ಓ.ಎಸ್. ನಂ. 323/201        ಪಿ.ಡಬ್ಲೂ-1                ಹೆಸರು -  ಮಹದೇವ**

**ಸಾಕ್ಷಿಯನ್ನು ದಿನಾಂಕಃ 12/01/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಎಸ್.ಎನ್. ಪ್ರತಿವಾದಿ ಪರ ವಕೀಲರಿಂದಃ-**

ನನ್ನ ತಂದೆಯ ಹೆಸರು ಸಣ್ಣಶೆಟ್ಟಿ. ನನ್ನ ತಾತನ ಹೆಸರು ಮುಳ್ಳಮಾದಶೆಟ್ಟಿ. ನಾನು ಕುಂಬಾರ ಕೊಪ್ಪಲು ಮೈಸೂರು ವಾಸಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಂಬಳೆ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ಅಂಬಳೆ ಗ್ರಾಮದಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ನಾನು ಮೈಸೂರಿನ ಕುಂಬಾರ ಕೊಪ್ಪಲು ನಲ್ಲಿ ವಾಸವಿದ್ದೇನೆ ಅಂಬಳೆಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ನಾನು 30-40 ವರ್ಷಗಳಿಂದಲು ಅಂಬಳೆ ಗ್ರಾಮದಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಫೋಟೋದಲ್ಲಿ ಇರುವ ಮನೆ ದಾವಾ ಸ್ವತ್ತಿನ ಚೆಕ್ಕುಬಂಧಿಯಲ್ಲಿ ಇದ್ದು ಸದರಿ ಮನೆಯಲ್ಲಿ ಪ್ರತಿವಾದಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಗುರುತಿಸುವ ಸಲುವಾಗಿ ಸದರಿ ಭಾವಚಿತ್ರವನ್ನು ನಿಸಿ-1 ಎಂದು ಗುರುತಿಸಲಾಯಿತು. ನಿಸಿ-1 ರಲ್ಲಿ ಕಂಡು ಬರುವ ಮನೆಯಲ್ಲಿ ಸುಮಾರು 40 ವರ್ಷಗಳಿಂದ ಪ್ರತಿವಾದಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಸದರಿ ಮನೆಯ ಎಲ್ಲಾ ದಾಖಲಾತಿಗಳು ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಸಸ್ ಮೆಂಟ್ ನಂಬರ್ ಅಥವಾ  ಜಂಜರ್ ನಂಬರ್ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ಈ ದಾವೆ ಏಕೆ ಸಲ್ಲಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ತೀರಿ ಹೋದ ನಂತರ ಪ್ರತಿವಾದಿಯು ದಾವಾ ಸ್ವತ್ತು ನನಗೆ ಸೇರಬೇಕು ಎಂದು ಗಲಾಟೆ ಮಾಡಿದ್ದರಿಂದ್ದಾಗಿ ಈ ದಾವೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ವಿರುದ್ದ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ ಎಂದು ತೋರಿಸಲು ದಾಖಲಾತಿಯನ್ನು ಹಾಜರಜುಪಡಿಸಿಲ್ಲ. ಈ ದಾವೆ ಸಲ್ಲಿಸುವ ಮುನ್ನ ನಾನು ಪ್ರತಿವಾದಿಗೆ ನೊಟೀಸ್ ನೀಡಿಲ್ಲ. ಖಾಲಿ ಜಾಗ ಮತು ಮನೆ ನಮ್ಮದು ಎಂದು ದಾವೆ ಸಲ್ಲಿಸಿದ್ದೇನೆ. ದಾವೆಯಲ್ಲಿ ಮನೆ ಕಟ್ಟಿದ್ದೇವೆ ಎಂದು ಹೇಳಿಲ್ಲ. ದಾವೆಯಲ್ಲಿ ಮನೆ ಕಟ್ಟಿದ್ದೇನೆ ಮತ್ತು ಪ್ರತಿವಾದಿ ಸದರಿ ಮನೆಗೆ ತೊಂದರೆ ನೀಡುತ್ತಿದ್ದಾರೆ ಎಂದು ಹೇಳಿಲ್ಲ. ಜಾಗ ಮತ್ತು ಮನೆ ನಮ್ಮದು ಎಂದು ಪ್ರತಿವಾದಿ ತೊಂದರೆ ನೀಡುತ್ತಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನೆ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**

-